ಅಧ್ಯಕ್ಷರು:– ಆಯಿತು. ಮಾನ್ಯ ಕೆ.ಎಂ. ಶಿವಲಿಂಗೇಗೌಡರು ಹಾಜರಿಲ್ಲ. ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಹಾಜರಿಲ್ಲ. ಮಾನ್ಯ ಬಿ.ಆರ್. ಪಾಟೀಲ್‌ರವರು ಮಾತನಾಡುವುದು.

2) ವಿಷಯ:– ಆಳಂದ ತಾಲ್ಲೂಕು ಗಡಿಭಾಗದ ಖಜೂರಿ ಹೋಬಳಿ ಕೇಂದ್ರದಲ್ಲಿ ಜೂನಿಯರ್ ಕಾಲೇಜು (P.U. college) ಒದಗಿಸುವ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):– ಮಾನ್ಯ ಅಧ್ಯಕ್ಷರೆ ಸಂಬಂಧಪಟ್ಟ ಸಚಿವರು ಹಾಜರಿಲ್ಲ.

ಅಧ್ಯಕ್ಷರು:– ಅವರು ಇದ್ದಾಗಲೇ ತಾವು ಕೇಳುತ್ತೀರಾ?

ಶ್ರೀ ಬಿ.ಆರ್. ಪಾಟೀಲ್:– ಏಕೆಂದರೆ ಪರಿಹಾರ ಸಮೇತ...

ಅಧ್ಯಕ್ಷರು:– ತಾವು ಈಗ ಕೇಳುವುದಕ್ಕೆ ಆಗುತ್ತದೆಯೋ ಇಲ್ಲವೋ?

ಶ್ರೀ ಬಿ.ಆರ್. ಪಾಟೀಲ್:– ಕೇಳುತ್ತೇನೆ. ಸರ್ಕಾರ ಗಮನಿಸಿದರೆ ಕೇಳುತ್ತೇನೆ.

ಅಧ್ಯಕ್ಷರು:– ಕೇಳಿ.

ಶ್ರೀ ಬಿ.ಆರ್. ಪಾಟೀಲ್:– ಕರ್ನಾಟಕ ಏಕೀಕರಣ ಆದ ಮೇಲೆ ನಮ್ಮ ಗಡಿಭಾಗದಲ್ಲಿ ಖಜೂರಿ ಒಂದು ಕಂದಾಯ ಹೋಬಳಿ ಕೇಂದ್ರ ಆಗಿದ್ದು, ಇಲ್ಲಿಯವರೆಗೆ ಅವರಿಗೆ ಒಂದು ಜೂನಿಯರ್ ಕಾಲೇಜು ಇಲ್ಲ. ಎಂಟು ಗ್ರಾಮದವರು ಮಹಾಜನ್ ಕಮಿಷನ್ ಪ್ರಕಾರ ಮಹಾರಾಷ್ಟ್ರಕ್ಕೆ ಹೋಗಬೇಕಾದವರು. ಆದರೂ ಅದು ನಿರ್ಣಯ ಆಗದಿದ್ದಕ್ಕೆ ನಮ್ಮ ಜೊತೆ ಉಳಿದಿದ್ದಾರೆ. ಅವರು ಏನು ಹೇಳುತ್ತಾರೆಂದರೆ ನಾವು ಕನ್ನಡ ಕಲಿಯಲು ತಯಾರಿದ್ದೇವೆ. ಮೊನ್ನೆ ಪ್ರಕರಣವಾದಾಗ ತಾವು ಖಜೂರಿ ಹೋಬಳಿ ಕೇಂದ್ರಕ್ಕೆ ಬಂದಿದ್ದೀರಿ. ನಾವು ಕನ್ನೆ ಕಲಿಯಲು ತಯಾರಿದ್ದೇವೆ. ನಮಗೆ ಅನುಕೂಲ ಮಾಡಿಕೊಡುವುದಿಲ್ಲ. ನಾವು ಹೇಗೆ ಕನ್ನಡ ಕಲಿಯುವುದು ಎಂದು ಕೇಳುತ್ತಾರೆ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ಖಜೂರಿ ಹೋಬಳಿ ಕೇಂದ್ರಕ್ಕೆ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರಾತಿ ಪ್ರಸ್ತಾವನೆ ಬಂದಿರುವುದಿಲ್ಲ. ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

(ಕಿಮ್ಮನೆ ರತ್ನಾಕರ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅಧ್ಯಕ್ಷರು:– ಮಾನ್ಯ ಕೋನರೆಡ್ಡಿಯವರು ಹಾಜರಿಲ್ಲ, ಮಾನ್ಯ ಎಂ.ಟಿ. ಕೃಷ್ಣಪ್ಪರವರು ಹಾಜರಿಲ್ಲ, ಮಾನ್ಯ ಆನಂದ @ ವಿಶ್ವನಾಥ ಚಂದ್ರಶೇಖರ್ ಮಾಮನಿಯವರು ಹಾಜರಿಲ್ಲ, ಮಾನ್ಯ ಗೋವಿಂದ ಎಂ. ಕಾರಜೋಳರವರು ಹಾಜರಿಲ್ಲ, ಮಾನ್ಯ ವೈ.ಎಸ್.ವಿ. ದತ್ತರವರು ಹಾಜರಿಲ್ಲ, ಮಾನ್ಯ ಕೆ. ಶ್ರೀನಿವಾಸಮೂರ್ತಿ ಹಾಜರಿಲ್ಲ.

ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 7 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 16.07.2014 ರಂದು ಬುಧುವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು.)